-

**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಬದಾಮಿ ಸಂಚಾರಿ ನ್ಯಾಯಾಲಯ, ಗುಳೇದಗುಡ್ಡ ರವರ ನ್ಯಾಯಾಲಯದಲ್ಲಿ.**

ಸಿಸಿ ನಂ.**718/2019**

1. ಕರ್ನಾಟಕ ಸರ್ಕಾರದ ಪರವಾಗಿ ಗುಳೇದಗುಡ್ಡ ಠಾಣಾ ಪೋಲಿಸರು

**...ಪಿರ್ಯಾದಿದಾರರು**

**ವಿರುದ್ಧ**

1. ಶ್ರೀ ರಮೇಶ ಈರಪ್ಪ ಅಬಕಾರಿ
   ವಯಾಃ 41 ವರ್ಷ,
   ಸಾಃ ಕೋಟೆಕಲ್ , ತಾಃ ಗುಳೇದಗುಡ್ಡ,
   ಜಿಃ ಬಾಗಲಕೋಟೆ.

**...ಆರೋಪಿತ**

**:: ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿ ಆರೋಪಿತನ ಹೇಳಿಕೆ ::**

**ಪ್ರಶ್ನೆ-1:** ಈ ಪ್ರಕರಣದಲ್ಲಿಯ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿಸಿಕೊಂಡಿದ್ದಿರಾ?

**ಉತ್ತರ:** ಕೇಳಿದ್ದೇನೆ.

**ಪ್ರಶ್ನೆ-2:** ಪ್ರಾಸಾ-1 ಹುಚ್ಚಪ್ಪ ನಿಂಗಪ್ಪ ಕಡಪಟ್ಟಿರರವರು ತಮ್ಮ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ದಿನಾಂಕಃ 04-08-2019 ರಂದು ಅವರು ಮನೆಯಲ್ಲಿರುವಾಗ ಅವರಿಗೆ ಚಾಸಾ-10 ಮತ್ತು 11 ರವರಿಂದ ಫೋನ ಕರೆ ಬಂದಿದ್ದು, ಆರೋಪಿತನಾದ ನೀನು ಅವರಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದು, ನೀನು ನನಗೆ ಲ್ಲಾ ಕೇಳಾಕತ್ತಿ ರಂಡಿ ಮಗನಾ, ಬೋಸಡಿ ಮಗಾ ಅಂತಾ ಅವಾಚ್ಯ ಶಬ್ದಗಳಿಂದ ಬೈದಿದ್ದು ಸದರಿ ವಿಚಾರ ಚಾಸಾ-1 ರವರು ಮುಖಾಂತರ ತಿಳಿದುಕೊಂಡಿದ್ದು, ಚಾಸಾ-10 ರವರನ್ನು ಆತನ ಪಾಲಕರು ಬಿಡಿಸಿಕೊಂಡು ಹೋಗಿದ್ದು ಪುನ: ರಾತ್ರಿ 9.00 ಗಂಟೆಗೆ ಆರೋಪಿತನಾದ ಅನೀನು ಅವರ ಮನೆಗೆ ಬಂದು ಅವಾಚ್ಯ ಶಬ್ದಗಳಿಂದ ಬೈದು ನಿನ್ನ ರುಂಡ ತೆಗೆಯುತ್ತೇನೆ ಎಂದು ಜೀವದ ಧಮಕಿ ಹಾಕಿದ್ದು ನಂತರ ನಿನ್ನ ಬೆದರಿಕೆ ಅಂಜಿ ಮನೆಯ ಒಳಗೆ ಹೋಗಿದ್ದು, ನಂತರ ಈ ಕುರಿತು ಪಿರ್ಯಾದಿಯನ್ನು ನೀಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

**ಉತ್ತರ:** ಸುಳ್ಳು

**ಪ್ರಶ್ನೆ-3:** ಪ್ರಾಸಾ-2 ಮನೋಹರ ಕಂಬಾಳಿಮಠರವರು ತಮ್ಮ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ಅವರು ಊಟಕ್ಕೆ ಬಂದಾಗ ಹೊರಗಡೆಯಿಂದ ಗಲಾಟೆ ಶಬ್ದ ಕೇಳುತ್ತಿತ್ತು ಅದನ್ನು ಕೇಳಿ ಅವರು ಹೊರಗಡೆ ಬಂದು ನೋಡಿದಾಗ ಜಗಳ ಮುಗಿದು ಹೋಗಿದ್ದು ಸಾಕ್ಷಿಗೆ ಗುನ್ನಾ ಜಾಗೆಯನ್ನು ತೋರಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

**ಉತ್ತರ:** ಸುಳ್ಳು

**ಪ್ರಶ್ನೆ-4:** ಪ್ರಾಸಾ-3 ಬಸವರಾಜ ಯಡಹಳ್ಳಿರವರು ತಮ್ಮ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ದಿ. 04.08.2019 ರಂದು 4 ಕ್ಕೆ ಚಾಸಾ-1 ರವರಿಗೆ ಆರೋಪಿಯು ಫೋನಿನ ಮುಖಾಂತರ ಅವಾಚ್ಯ ಶಬ್ದಗಳಿಂದ ಬೈದಾಡಿದ್ದು, ಗಟಾರ ಗಲೀಜು ಆಗಿರುವ ಕುರಿತು ಆರೋಪಿಯನ್ನು ವಿಚಾರಿಸಿದಾಗ ಆರೋಪಿತನಾದ ನೀನು ಅವರಿಗು ಸಹ ಅವಾಚ್ಯ ಶಬ್ದಗಳಿಂದ ಬೈದಾಡಿದ್ದು , ಪುನ: ಅದೇ ದಿನ ಸಾಯಂಕಾಲ 6 ರಿಂ 7 ಗಂಟೆಯ ಸುಮಾರಿಗೆ ಚಾಸಾ-1 ರವರ ಮನೆಗೆ ಹೋಗಿ ಬಾಯಿ ಮಾಡಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

**ಉತ್ತರ: ಸುಳ್ಳು**

**ಪ್ರಶ್ನೆ-5:** ಪ್ರಾಸಾ-7 ಅನ್ನಪೂರ್ಣ ಕಡಪಟ್ಟಿರವರು ತಮ್ಮ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ಸುಮಾರು 4 ವರ್ಷದ ಹಿಂದೆ ಆರೋಪಿತನಾದ ನೀನು ಮೂರು ಪ್ಲಾಟು ತೆಗೆದುಕೊಂಡ ಬಗ್ಗೆ ಚಾಸಾ-1 ರವರು ಕೇಳಿದ್ದಕ್ಕೆ ಬೈದಿದ್ದು, ನಂತರ ರಾತ್ರಿ 9.00 ಗಂಟೆಗೆ ಅವರು ಊಟ ಮಾಡುತ್ತಿದ್ದಾಗ ಆರೋಪಿ ನಮ್ಮ ಮನೆಗೆ ಬಂದು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದು ಆಗ ಅವರು ಹೊರಗೆ ಬಂದು ನೋಡಲಾಗಿ ಅಲ್ಲಿ ಸಾಕಷ್ಟು ಜನರು ಕೂಡಿದ್ದು, ನಿನ್ನನ್ನು ಏಕೆ ಬೈದಿ ಎಂದು ಕೇಳಿದ್ದಕ್ಕೆ ಅವರಿಗೆ ಕೊಲೆ ಬೆದರಿಕೆ ಹಾಕಿ ಸೂಳೆ ಮಗ ಎಂದು ಬೈದು ಹೊರಟು ಹೋಗಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

**ಉತ್ತರ: ಸುಳ್ಳು**

**ಪ್ರಶ್ನೆ-6:** ಪ್ರಾಸಾ-8 ಯಲ್ಲಪ್ಪ ಹನಮಪ್ಪ ಮಲ್ಲಾರವರು ತಮ್ಮ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ದಿ. 05.08.2019 ರಂದು ಠಾಣೆಯಲ್ಲಿ ಠಾಣಾ ಪ್ರಭಾರ ಕರ್ತವ್ಯದಲ್ಲಿದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ದಿ. 04.08.2019 ರಂದು ಆರೋಪಿತನು ಮೊಬೈಲ ಫೋನ ಮುಖಾಂತರ ಅವಾಚ್ಯ ಶಬ್ದಗಳಿಂದ ಬೈದಿದ್ದು, ಅದರಂತೆ ಚಾಸಾ-4, 10 ಮತ್ತು 11 ರವರಿಗೂ ಸಹ ಅವಾಚ್ಯ ಶಬ್ದಗಳಿಂದ ಬೈಯ್ದಿರುತ್ತಾನೆ ಎಂದು ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿ ಆಧಾರದ ಮೇಲೆ ನಾನ ಕಾಗ್ನಿಜೇಬಲ ಪ್ರಕರಣ ದಾಖಲಿಸಿಕೊಂಡು, ನ್ಯಾಯಾಲಯದ ಅನುಮತಿ ಪಡೆದು ಆರೋಪಿಯ ಮೇಲೆ ಗುಳೇದಗುಡ್ಡ

ಪೋಲಿಸ ಠಾಣಾ ಅಪರಾಧ ಸಂ. 41/2019 ಭಾ.ದಂ.ಸಂ. ಕಲಂ.504, 506 ರಡಿ ಪ್ರಕರಣ ದಾಖಲಿಸಿಕೊಂಡು ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಕಳಿಸಿಕೊಟ್ಟಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

**ಉತ್ತರ: ಸುಳ್ಳು**

**ಪ್ರಶ್ನೆ-7:** ಫ್ರಾಸಾ-8 ರವರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ದಿ.05.08.2019 ರಂದು ಚಾಸಾ-2 ಮತ್ತು 3 ರವರ ಸಮಕ್ಷಮ ಚಾಸಾ-1 ರವರ ಮನೆ ಮುಂದೆ ಘಟನಾ ಸ್ಥಳ ಪಂಚನಾಮೆ ಜರುಗಿಸಿ, ನಂತರ ಆರೋಪಿಗೆ ಸಿ.ಆರ್.ಪಿ.ಸಿ.41(ಎ)ರಡಿ ನೋಟಿಸ ನೀಡಿ ಆತನಿಗೆ ದಿ.06.08.2019 ರ ಬೆಳಗಿನ 11.00 ಗಂಟೆಗೆ ಠಾಣೆಗೆ ಹಾಜರಾಗಲು ತಿಳಿಸಿದ್ದು, ನಂತರ ಚಾಸಾ-4 ರಿಂದ 11 ರವರ ಹೇಳಿಕೆ ಪಡೆದುಕೊಂಡಿದ್ದು, ಘಟನೆ ನಡೆದ ದಿನ ಕರ್ತವ್ಯ ನಿರತನಾದ ಬಗ್ಗೆ ಪರಿಶೀಲಿಸಲು ಚಾಸಾ-12 ರವರಿಗೆ ದಿ. 06.08.2019 ರಂದು ಪತ್ರ ಬರೆದಿರುತ್ತಾರೆ, ಅದರಂತೆ ಚಾಸಾ-12 ರವರು ಆರೋಪಿ ಘಟನೆ ನಡೆದ ದಿನ ಕರ್ತವ್ಯ ನಿರತನಾದ ಪತ್ರ ನೀಡಿದ್ದು, ಅದೇ ದಿನ ಚಾಸಾ-1 ರವರ ಮೊಬೈಲ ನಂ. 95353382812 ಮತ್ತು ಚಾಸಾ-10 ರವರ ಮೊಬೈಲ ನಂ. 9008448024 ಇದರ ದಿ. 01.01.2019 ರಿಂದ 06.09.2019 ರವರೆಗಿನ ಕಾಲ ಡಿಟೆಲ್ಸ ಪ್ರಮಾಣಿತ ಕಾರ್ಯಾಚರಣೆ ವಿಧಾನದ ಪ್ರಕಾರ ಪಡೆದುಕೊಂಡು ತನಿಖಾ ಕಡತಕ್ಕೆ ಅಳವಡಿಸಿಕೊಂಡು, ನಂತರ ಆರೋಪಿತನ ಮೇಲೆ ಸಾಕಷ್ಟು ಸಾಕ್ಷಿ ಆಧಾರಗಳು ಇರುವುದರಿಂದ ಆರೋಪಿತನಾದ ನಿನ್ನ ಮೇಲೆ ದಿ. 06.08.2019 ರಂದು ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

**ಉತ್ತರ: ಸುಳ್ಳು**

**ಪ್ರಶ್ನೆ-8:** ಫ್ರಾಸಾ-9 ಮಹಿಬೂಬ ಮುಲ್ಲಾರವರು ತಮ್ಮ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ದಿ.04.08.2019 ರಂದು ರಾತ್ರಿ 9.00 ಗಂಟೆಗೆ ದೇಸಾಯಿ ಅವರ ಮನೆಗೆ ಹೋಗಿ ವಾಪಸ್ ಬರುವಾಗ ಚಾಸಾ-1 ರವರ ಮನೆಯ ಮುಂದೆ ಬಾಯಿ ಮಾಡುವ ಶಬ್ದ ಕೇಳಿದ್ದು ಆಗ ಅವರು ಹೋಗಿ ನೋಡಲಾಗಿ ಆರೋಪಿತನಾದ ನೀನು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈಯ್ಯುತ್ತಿದ್ದು, ಅವರು ನಿನಗೆ ಹಿರಿಯರಿಗೆ ಹಾಗೆಲ್ಲ ಬೈಯ್ಯಬೇಡ ಅಂತಾ ಪ್ರಶ್ನೆ ಮಾಡಿದ್ದಕ್ಕೆ ನೀನು ಅವರಿಗೂ ಸಹ ನೀನಾರು ಎಂದು ಏರು ಧ್ವನಿಯಲ್ಲಿ ಮಾತಾನಾಡಿರುತ್ತೀಯಾ ಎಂದು

ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

**<u>ಉತ್ತರ: ಸುಳ್ಳು</u>**

**<u>ಪ್ರಶ್ನೆ-9:</u>** ಪ್ರಾಸಾ-10 ಈಶ್ವರಪ್ಪ ದಾಸರರವರು ತಮ್ಮ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ದಿ. 04.08.2019 ರಂದು ರಾತ್ರಿ 9.00 ಗಂಟೆಗೆ ಕೋಟೆಕಲ್ ಗ್ರಾಮದ ಹುಚ್ಚೇಶ್ವರ ಮಠದಲ್ಲಿ ಪುರಾಣ ನಡೆದಿತ್ತು. ಸದರಿ ಪುರಾಣದ ಪ್ರವಚನ ಕೇಳಿಕೊಂಡು ಅವರು ಅವರ ಮನೆಗೆ ವಾಪಸ್ ಬರುವಾಗ ಚಾಸಾ-1 ರವರ ಮನೆಯ ಮುಂದೆ ಆರೋಪಿ ಬೈಯ್ದಾಡುತ್ತಿದ್ದನ್ನು ನೋಡಿ ಯಾಕೆ ಈ ರೀತಿ ಅವಾಚ್ಯ ಶಬ್ದಗಳಿಂದ ಬೈಯ್ಯುತ್ತಿದ್ದೀಯಾ ಎಂದು ಕೇಳಿದಾಗ ನೀನು ಅಲ್ಲಿಂದ ಓಡಿ ಹೋಗಿರುತ್ತೀಯಾ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

**<u>ಉತ್ತರ: ಸುಳ್ಳು</u>**

**<u>ಪ್ರಶ್ನೆ-9:</u>** ಪ್ರಾಸಾ-10 ರವರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ಚಾಸಾ-1, 2, ಈಶ್ವರಪ್ಪ ಮತ್ತು ಚಾಸಾ-7 ರವರು ಎಲ್ಲರು ಸೇರಿ ಆಗಾಗ ಕೋಟೆಕಲ್ ಗ್ರಾಮ ಪಂಚಾಯತಿಗೆ ಹೋಗಿ ಅಲ್ಲಿರುವ ಸಿಬ್ಬಂದಿ ಜನರಿಗೆ ಊರಿನಲ್ಲಿರುವ ನೀರಿನ ವ್ಯವಸ್ಥೆ ಮತ್ತು ಗಟಾರ ವ್ಯವಸ್ಥೆ ಮತ್ತು ಇತರೆ ವ್ಯವಸ್ಥೆಗಳನ್ನು ಮಾಡಿಸುವುದಾಗಿ ಮೌಖಿಕವಾಗಿ ಹಳುತ್ತಿದ್ದು, ದಿ.04.08.2019 ರಂದು ಸಾಯಂಕಾಲ 04.26 ರಿಂದ 04.43 ರವರೆಗೆ ಆರೋಪಿತನಾದ ನೀನು ಅದೇ ಊರಿನ ಚಾಸಾ-10 ರವರ ಮೋಬೈಲ ನಂ. 9008448024 ಮತ್ತು ಚಾಸಾ-11 ರವರ ಮೊಬೈಲ ನಂ.95353382812 ಇದರಿಂದ ಚಾಸಾ-1 ರವರ ಮೊಬೈಲ ನಂ. 9880520964 ಇದಕ್ಕೆ ಫೋನ ಮಾಡಿ ಲೇ ಬೋಸಡಿ ಮಗನಾ, ಸೂಳಿ ಮಗನಾ, ಹಾದರಗಿತ್ತಿ ಮಗನಾ ನಿಂದು ತಿಂಡಿ ಬಹಳಾ ಆಗೈತಿ, ನಮ್ಮ ಪಂಚಾಯತಿಯಿಂದಾ ಕೆಲಸ ಕೇಳುತೀದಿ ಮಗನಾ ನಿನ್ನ ಊರು ಬಿಟ್ಟು ಓಡಿಸ್ತಿನಿ ಅಂತಾ ಅವಾಚ್ಯ ಶಬ್ದಗಳಿಂದ ನಿಂದನೆ ಮಾಡಿದನು ಎಂದು ಚಾಸಾ-1 ರವರು ಅವರಿಗೆ ಹೇಳಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

**<u>ಉತ್ತರ: ಸುಳ್ಳು</u>**

**<u>ಪ್ರಶ್ನೆ-10:</u>** ಪ್ರಾಸಾ-10 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ನಂತರ ಅದೇ ದಿನ ರಾತ್ರಿ 9.30 ಗಂಟೆಯ ಸುಮಾರಿಗೆ ಚಾಸಾ-1 ರವರು ತಮ್ಮ ಮನೆಯಲ್ಲಿದ್ದಾಗ

ಆರೋಪಿತನಾದ ನೀನು ಚಾಸಾ-1 ರವರು ಮನೆಯ ಮುಂದೆ ಬಂದು ಲೇ ಬೋಸಡಿ ಮಗನಾ, ಸೂಳಿ ಮಗನಾ, ಹಾದರಗಿತ್ತಿ ಮಗನಾ ನಿಂದು ತಿಂಡಿ ಬಹಳಾ ಆಗೈತಿ, ನಮ್ಮ ಪಂಚಾಯತಿಯಿಂದಾ ಕೆಲಸ ಕೇಳುತೀದಿ ಮಗನಾ ನಿನ್ನ ಊರು ಬಿಟ್ಟು ಓಡಿಸ್ತಿನಿ ಅಂತಾ ಅವಾಚ್ಯ ಶಬ್ದಗಳಿಂದ ನಿಂದನೆ ಮಾಡಿ ನಿಂದು ಬಹಳಾ ಆಗೈತಿ ಮನೆ ಬಿಟ್ಟು ಹೊರಗೆ ಬಾ ನಿನ್ನನ್ನು ಖಲಾಸ ಮಾಡುತ್ತೇನೆ ಎಂದು ಜೀವಬೆದರಿಕೆ ಹಾಕಿರುತ್ತೀಯಾ ಆಗ ಚಾಸಾ-9 ರವರು ಮದ್ಯ ಪ್ರವೇಶಿಸಿ ನಿನಗೆ ಬುದ್ದಿವಾದ ಹೇಳಿ ವಾಪಸ್ ಕಳಿಸಿರುತ್ತಾರೆ ಚಾಸಾ-1 ರವರು ಅವರಿಗೆ ಹೇಳಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

**ಉತ್ತರ: ಸುಳ್ಳು**

**ಪ್ರಶ್ನೆ-11:** ಪ್ರಾಸಾ-12 ಲಕ್ಷ್ಮಣ ಶಾಂತಕೇರಿರವರು ತಮ್ಮ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ದಿ. 04.08.2019 ರಂದು ಚಾಸಾ-13 ರವರು ನಿನಗೆ ಸಂಬಂದಿಸಿದ ಉದ್ಯೋಗ ಪ್ರಮಾಣ ಪತ್ರ ಪೂರೈಸಲು ಲಿಖಿತ ಪತ್ರ ನೀಡಿದ್ದರು, ನಂತರ ದಿ. 05.08.2019 ರಂದು ಚಾಸಾ-13 ರವರಿಗೆ ನಿನ್ನ ಕರ್ತವ್ಯದ ಕುರಿತು ಪ್ರಮಾಣ ಪತ್ರ ಪೂರೈಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

**ಉತ್ತರ: ಸುಳ್ಳು**

ಪ್ರಶ್ನೆ-2: ಈ ಪ್ರಕರಣದಲ್ಲಿ ನಿಮಗೆ ಇನ್ನೇನಾದರೂ ಹೇಳುವುದು ಇದೆಯಾ ?

ಉತ್ತರ: ಇಲ್ಲ

ಪ್ರಶ್ನೆ-2: ಈ ಪ್ರಕರಣದಲ್ಲಿ ನಿಮ್ಮ ಪರವಾಗಿ ಸಾಕ್ಷ್ಯ ವಿಚಾರಣೆ ಮಾಡಿಸುತ್ತೀರಾ ಅಥವಾ ಯಾವುದಾದರೂ ದಾಖಲಾತಿಗಳನ್ನು ಹಾಜರುಪಡಿಸುತ್ತೀರಾ??

ಉತ್ತರ: ಇಲ್ಲ.

(ಆರೋಪಿಗೆ ಹೇಳಿಕೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಇಂದು ನಮ್ಮ ಸಮಕ್ಷಮ ಓದಿ ಹೇಳಿ ವ ಕೇಳಿ ಅವರು ಅದನ್ನು ತಿಳಿದುಕೊಂಡು ನಂತರ ಅವರು ಕೊಟ್ಟ ಉತ್ತರಗಳನ್ನು ನಮೂದಿಸಿಕೊಳ್ಳಲಾಯಿತು)

ದಿನಾಂಕಃ 23-02-2026
ಸ್ಥಳಃ ಗುಳೇದಗುಡ್ಡ

HARISH JADHAV

Digitally signed by HARISH JADHAV
Date: 2026.02.26 15:30:59 +0000

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.,
ಬದಾಮಿ, ಸಂಚಾರಿ ನ್ಯಾಯಾಲಯ ಗುಳೇದಗುಡ್ಡ.